## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಇವರು ನಿಯಮ –330 ರಡಿಯಲ್ಲಿ ನೀಡಿರುವ ಸೂಚನೆಗೆ ಮಾಹಿತಿ

### ಸೂಚನೆ:

**"ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಇವರು ದಿ:29–05–2021 ರಂದು ಸರ್ಕಾರದ ಸಹಕಾರಿ ನಿಯಮಾವಳಿಯಂತೆ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸದಸ್ಯತ್ವ ಪಡೆಯಲು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಕುರಿತು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಆಡಳಿತ ಮಂಡಳಿಯ ದಿ:11–08–2021 ರ ಸಭೆಯಲ್ಲಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅರ್ಜಿಯನ್ನು ಮಾನ್ಯ ಮಾಡಿ, ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸದಸ್ಯತ್ವ ನೀಡಲು ತೀರ್ಮಾನಿಸಿ ಒಪ್ಪಿಗೆ ನೀಡಲಾಗಿದೆ. ಪರಂತು ಇಲ್ಲಿಯವರೆಗೂ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇವರಿಗೆ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸದಸ್ಯತ್ವ ನೀಡದೇ ಅನಗತ್ಯ ವಿಳಂಬ ನೀತಿ ಧೋರಣೆಯಿಂದ ಜಂಬೂರು ವ್ಯಾಪ್ತಿಯ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿರುವುದು ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸದನದ ಗಮನ ಸೆಳೆಯಲು ನಿಯಮ 330 ರ ಮೇರೆಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."**

*****

### ಮಾಹಿತಿ:

ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಈ ಸಂಘವು ಬ್ಯಾಂಕಿನ ಸದಸ್ಯತ್ವ ಪಡೆಯುವ ಸಂಬಂಧ ಸದಸ್ಯತ್ವದ ಅರ್ಜಿ ನೀಡುವಂತೆ ದಿನಾಂಕ: 28–01–2021 ರಂದು ಲಿಖಿತ ಅರ್ಜಿ ನೀಡಿರುತ್ತಾರೆ.

ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಹೋಬಳಿ, ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳ್ಳಿ ಗ್ರಾಮದ ಗ್ರಾಮಸ್ಥರುಗಳು ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ದಿನಾಂಕ: 15–03–2021 ರಂದು ಅರ್ಜಿ ನೀಡಿ, ಜಂಬೂರು ಸಂಘವನ್ನು ರಾಜಕೀಯ ಕಾರಣಕ್ಕಾಗಿ ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿ, ಸಾಕಷ್ಟು ಕೃಷಿ ಹಿಡುವಳಿ ಭೂಮಿ ಇಲ್ಲದೇ ಇದ್ದರೂ ಜಂಬೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸಿರುತ್ತಾರೆ. ಸದರಿ ಸಂಘದಲ್ಲಿ ಪಾರದರ್ಶಕವಾಗಿ ಎಲ್ಲಾ ರೈತರಿಗೆ ಸದಸ್ಯತ್ವ ನೀಡಿರುವುದಿಲ್ಲ ಹಾಗೂ ಅತ್ತಿಹಳ್ಳಿ, ಹುಲಿಕೆರೆ ಮತ್ತು ತೆಂಕನಹಳ್ಳಿ ಗ್ರಾಮಗಳನ್ನು ನುಗ್ಗೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಬೇರ್ಪಡಿಸಲಾಗಿದ್ದು, ಈ ರೀತಿ ಸಹಕಾರ ಸಂಘಗಳ ವಿಭಜನೆಯಿಂದ ಎರಡೂ ಸಂಘಗಳು ದುಡಿಯುವ ಬಂಡವಾಳ ಮತ್ತು ಆದಾಯ ಇಲ್ಲದೇ ನಷ್ಟಕ್ಕೆ ಒಳಗಾಗುವುದರಿಂದ ರೈತರಿಗೆ, ಮಹಿಳೆಯರಿಗೆ ಹಾಗೂ ಸಾಮಾನ್ಯ ಜನರಿಗೆ ತೊಂದರೆ ಉಂಟಾಗುವುದರಿಂದ ಸದರಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರದ್ದುಪಡಿಸುವಂತೆ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಮನವಿ ಸಲ್ಲಿಸಲಾಗಿರುತ್ತದೆ. ಆದುದರಿಂದ ಕಾನೂನು ಮತ್ತು ನಿಯಮಾವಳಿ ವಿರುದ್ಧವಾಗಿ ನೋಂದಾಯಿಸಲಾಗಿರುವ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಸದಸ್ಯತ್ವ ನೀಡಲು ಕೋರಿ ಅರ್ಜಿ ಸಲ್ಲಿಸಿದಲ್ಲಿ ಬ್ಯಾಂಕಿನ ಸದಸ್ಯತ್ವವನ್ನು ನೀಡಬಾರದೆಂದು ಮನವಿ ಮಾಡಿರುತ್ತಾರೆ.

ಈ ಕುರಿತು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಪ್ರಕಾರ ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವಾಗ ಪ್ರತಿ ಸಂಘವು ಕನಿಷ್ಟ 4000 ಎಕರೆ ಸಾಗುವಳಿ ಭೂಮಿಯನ್ನು, ಕನಿಷ್ಟ 05 ಕಿ.ಮೀ. ಪರಿಧಿಯನ್ನು, ಕನಿಷ್ಟ 600 ಕುಟುಂಬಗಳ ಗ್ರಾಮಗಳನ್ನು ಹೊಂದಿರುವುದು ಮಾನದಂಡವಾಗಿರುತ್ತದೆ. ಸದರಿ ಮಾನದಂಡಗಳನ್ನು ಅನುಸರಿಸದೇ ಸಂಘಗಳನ್ನು ವಿಭಜನೆ ಮಾಡಿದಲ್ಲಿ ಸಂಘಗಳು ನಷ್ಟವನ್ನು ಹೊಂದಿ, ಕಾರ್ಯ ಸ್ಥಗಿತವಾಗುತ್ತವೆ ಹಾಗೂ ಅತ್ತಿಹಳ್ಳಿ, ಹುಲಿಕೆರೆ ಮತ್ತು ತೆಂಕನಹಳ್ಳಿ ಗ್ರಾಮಸ್ಥರುಗಳ ಮನವಿಯ ಹಿನ್ನಲೆಯಲ್ಲಿ ಈ ಕುರಿತು ಪರಿಶೀಲಿಸುವುದು ಅಗತ್ಯವೆಂದು ತಿಳಿದು ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ಪಡೆಯುವ ಅರ್ಜಿಯನ್ನು ನೀಡುವ ವಿಷಯವನ್ನು ಮುಂದೂಡಲು ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಈ ಕುರಿತು ಬ್ಯಾಂಕಿನಿಂದ ಹಿಂಬರಹ ನೀಡಲಾಗಿರುತ್ತದೆ.

ಅಧ್ಯಕ್ಷರು ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇವರು, ಸರ್ಕಾರದ ಸುತ್ತೋಲೆ ದಿನಾಂಕ:12–05–2017 ರಂತೆ ಜಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಘವನ್ನು ರಚಿಸಲಾಗಿದ್ದು, ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡದಿದ್ದರೆ ಈ ಭಾಗದ ರೈತರಿಗೆ ಹಾಗೂ ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತದೆ, ಆದ್ದರಿಂದ ಜಂಬೂರು ಸಹಕಾರ ಸಂಘಕ್ಕೆ ಸದಸ್ಯತ್ವ ನೀಡಬೇಕೆಂದು ದಿನಾಂಕ 29–05–2021 ರಂದು ಲಿಖಿತ ಮನವಿ ಸಲ್ಲಿಸಿದ್ದನ್ನು ದಿನಾಂಕ: 11–08–2021 ರ ಆಡಳಿತ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಲಾಗಿರುತ್ತದೆ. ದಿನಾಂಕ:11–08–2021 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಚನ್ನರಾಯಪಟ್ಟಣ ತಾಲ್ಲೂಕು ಈ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ಪಡೆಯುವ ನಿಗಧಿತ ಅರ್ಜಿ ನಮೂನೆಯನ್ನು ನೀಡಲು ಒಪ್ಪಿ ತೀರ್ಮಾನಿಸಲಾಗಿರುತ್ತದೆ.

ಅದರಂತೆ ಬ್ಯಾಂಕಿನ ಸದಸ್ಯತ್ವ ಪಡೆಯುವ ಅರ್ಜಿ ನಮೂನೆಯನ್ನು ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅರ್ಜಿ ನೀಡಲಾಗಿ ಜಂಬೂರು ಸಹಕಾರ ಸಂಘದವರು ಭರ್ತಿಮಾಡಿದ ಅರ್ಜಿ ನಮೂನೆಯನ್ನು ದಿನಾಂಕ:20–09–2021 ರಂದು ಬ್ಯಾಂಕಿಗೆ ನೀಡಿರುತ್ತಾರೆ. ಸದರಿ ಅರ್ಜಿಯನ್ನು ದಿನಾಂಕ: 24–11–2021 ರ ಆಡಳಿತ ಮಂಡಳಿ ಸಭೆಗೆ ಮಂಡಿಸಲಾಗಿತ್ತು, ಆದರೆ ಚುನಾವಣಾ ಆಯೋಗವು ಕರ್ನಾಟಕ ವಿಧಾನಪರಿಷತ್ ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ಚುನಾವಣೆ ನೀತಿ ಸಂಹಿತೆ ಹಿನ್ನಲೆಯಲ್ಲಿ ಸದರಿ ಆಡಳಿತ ಮಂಡಳಿ ಸಭೆಯನ್ನು ದಿನಾಂಕ:19–12–2021 ಕ್ಕೆ ಮುಂದೂಡಲಾಗಿರುತ್ತದೆ.

ದಿನಾಂಕ:19–12–2021 ರಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಷಯದ ಕುರಿತು ಚರ್ಚಿಸಲಾಗಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿಮಾಡುವ ಪ್ರಾಧಿಕಾರವು ಸಹಕಾರ ಸಂಘಗಳ ಸಹಾಯಕ ನಿಬಂಧಕರ ವ್ಯಾಪ್ತಿಗೆ ಬರುತ್ತದೆ. ಸದರಿ ಸಂಘದ ನೋಂದಣಿಯು ಅನಧೀಕೃತವಾಗಿರುವುದೇ ಆಗಿದ್ದಲ್ಲಿ ಅಥವಾ ಸದರಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೋಂದಣಿಯಿಂದ ಬಾಧಿತರಾದವರು ಸಂಬಂಧಿಸಿದ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವುದು ನಿಯಮ. ಈಗಾಗಲೇ ಕಾಯ್ದೆ ಅಡಿ ನೋಂದಣಿಗೊಂಡು ಡಿ.ಸಿ.ಸಿ. ಬ್ಯಾಂಕಿಗೆ ಸದಸ್ಯತ್ವ ಕೋರಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸಕಾರಣವಿಲ್ಲದೆ ಅಥವಾ ಯಾವುದೇ ನ್ಯಾಯಾಲಯದ ತಡೆಯಾಜ್ಞೆ ಇಲ್ಲದೆ ಬ್ಯಾಂಕಿನ ಸದಸ್ಯತ್ವವನ್ನು ನಿರಾಕರಿಸುವುದು ಸಮಂಜಸವಲ್ಲ ಎಂಬ ಅಂಶವನ್ನು

ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಸಭೆಯ ಗಮನಕ್ಕೆ ತಿಳಿಸಿದರು, ಸಭೆಯಲ್ಲಿ ಹಾಜರಿದ್ದ ಸಹಕಾರ ಸಂಘಗಳ ಉಪ ನಿಬಂಧಕರು ಸಹ ನಿಯಮಾನುಸಾರ ನೋಂದಣಿಯಾಗಿರುವ ಸಂಘಗಳಿಗೆ ಬ್ಯಾಂಕಿನ ಸದಸ್ಯತ್ವ ನೀಡುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ಮುಂದುವರೆದು ಸದರಿ ಸಂಘವನ್ನು ಅನಧೀಕೃತವಾಗಿ ನೋಂದಣಿ ಮಾಡಲಾಗಿರುತ್ತದೆ ಎಂದು ಸದರಿ ಸಂಘದ ವ್ಯಾಪ್ತಿಯ ಗ್ರಾಮಸ್ಥರುಗಳು ದೂರು ನೀಡಿರುವ ಹಿನ್ನಲೆಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರಿಂದ ವರದಿ ಪಡೆದು ನಂತರ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ನೀಡುವ ಬಗ್ಗೆ ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ದಿನಾಂಕ:19-12-2021 ರ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಸಹಕಾರ ಸಂಘಗಳ ಉಪ ನಿಬಂಧಕರಿಂದ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೋಂದಣಿ ಕುರಿತು ವರದಿ ನೀಡಲು ಕೋರಲಾಗಿತ್ತು.

ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯ ಗ್ರಾಮಗಳ ರೈತಾಪಿ ಸದಸ್ಯರುಗಳ ಹಿತದೃಷ್ಟಿಯಿಂದ ನುಗ್ಗೇಹಳ್ಳಿ ಹಾಗೂ ಕಲ್ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿನ ಗ್ರಾಮ ಬಿಡುಗಡೆ ಸಂಬಂಧದ ಬೈಲಾಕ್ಕೆ ತಿದ್ದುಪಡಿ ಮಾಡಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 12 (6) ರಡಿ ಗ್ರಾಮಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಇದರ ಕಾರ್ಯವ್ಯಾಪ್ತಿ 6 ಗ್ರಾಮಗಳಿಗೆ ಸೀಮಿತವಾಗಿದ್ದು, ಸದರಿ ಕಾರ್ಯವ್ಯಾಪ್ತಿಯಲ್ಲಿ 4472.91 ಎಕರೆ ಸಾಗುವಳಿ ಭೂಮಿ ಹೊಂದಿರುತ್ತದೆ, 5 ಕಿ. ಮೀ. ಪರಿಧಿ ಹಾಗೂ ಸುಮಾರು 2923 ಕೃಷಿ ಕುಟುಂಬಗಳನ್ನು ಹೊಂದಿರುತ್ತದೆ, ಪ್ರಸ್ತಾಪಿತ ಸಹಕಾರ ಸಂಘದ ಸ್ಥಾಪನೆಗೆ ನಿಗದಿಪಡಿಸಿರುವ ಮಾನದಂಡಗಳು ಪೂರಕವಾಗಿರುತ್ತದೆ, ಮಾನದಂಡಗಳನ್ನು ಅನುಸರಿಸಿ ಸಂಘದ ನೋಂದಣಿಗೆ ಕ್ರಮವಿಡಲಾಗಿರುತ್ತದೆ ಎಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ವರದಿ ಮಾಡಿರುತ್ತಾರೆ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ದಿನಾಂಕ:08-03-2022 ರಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಿ, ಸದಸ್ಯತ್ವ ನೀಡುವ ಕುರಿತು ಕ್ರಮವಹಿಸಲಾಗುವುದು ಎಂದು ಹಾಸನ ಡಿಸಿಸಿ ಬ್ಯಾಂಕ್ ನಿ. ಇವರು ವರದಿಸಿರುತ್ತಾರೆ.

**ಸಂಖ್ಯೆ: ಸಿಒ 121 ಸಿಎಲ್‌ಎಸ್ 2022**

(ಸಹಿ)

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**